ಡಾ।। ಶಿವರಾಮ ಕಾರಂತರ ಸಾಹಿತ್ಯ ಪ್ರಕಟಣೆ

216 (2385) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕಡಲ ತೀರದ ಭಾರ್ಗವ ಡಾ: ಶಿವರಾಮ ಕಾರಂತರ ಸಮಗ್ರ ಸಾಹಿತ್ಯವನ್ನು ಸರ್ಕಾರ ಪ್ರಕಟಿಸಲು ನಿರ್ಧರಿಸಿದೆಯೆ; ಹಾಗಿದ್ದಲ್ಲಿ ಯಾವಾಗ ನಿರ್ಧರಿಸಲಾಯಿತು;

ಆ) ಈ ಸಮಗ್ರ ಸಾಹಿತ್ಯವು ಈಗ ಯಾವ ಹಂತದಲ್ಲಿದೆ ಮತ್ತು ಇದರ ಪ್ರಕಟಣೆಯ ಹೊಣೆಯನ್ನು ಯಾರಿಗೆ ವಹಿಸಲಾಗಿದೆ;

ಇ) ಈ ಕಾರ್ಯ ವಿಳಂಬವಾಗಲು ಕಾರಣಗಳೇನು?

ಶ್ರೀಮತಿ ರಾಣಿ ಸತೀಶ್ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು.

ಅ) ಹೌದು 1998-99ರ ಸಾಲಿನಲ್ಲಿ ನಿರ್ಧರಿಸಲಾಯಿತು.

ಆ) ಡಾ: ಶಿವರಾಮ ಕಾರಂತರ ಎಲ್ಲ ಕೃತಿಗಳ ಹಕ್ಕು ಶ್ರೀಮತಿ ಮಾಲಿನಿ ಮಲ್ಯ ಅವರಿಗಿದೆ. ಕೃತಿಕಾರರು ವಹಿಸಿರುವ ಹಕ್ಕುದಾರರಿಂದ ಗ್ರಂಥಗಳ ಮೂಲ ಹಕ್ಕಿನ ಬಗ್ಗೆ ಕರಾರು ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿದೆ. ಪ್ರಕಟಣೆಯ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ವಹಿಸಿದೆ.

ಇ) ಕೃತಿಗಳ ಹಕ್ಕುದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮತ್ತು ಡಾ:ಶಿವರಾಮ ಕಾರಂತರ ಪುಸ್ತಕಗಳ ಮುದ್ರಣ ಹಾಗೂ ಮಾರಾಟದ ಹಕ್ಕುದಾರರಾದ ಎಸ್.ಬಿ.ಎಸ್.ಪಬ್ಲಿಷರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ ಅವರ ಬಳಿ ಇದ್ದ ಕಾರಣ ಕೃತಿಗಳ ಹಕ್ಕುಗಳನ್ನು ಪಡೆಯಲು ವಿಳಂಬವಾಗಿದೆ.

ಶ್ರೀ ಎಸ್.ಸುರೇಶ್ ಕುಮಾರ್ (ಜಗದೀಶ್ ಶೆಟ್ಟರ್‌ರವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ಶಿವರಾಮ ಕಾರಂತರ ಸಮಗ್ರ ಸಾಹಿತ್ಯವನ್ನು ಸರ್ಕಾರ ಪ್ರಕಟಿಸುವುದಕ್ಕೆ ನಿರ್ಧರಿಸಿದೆಯೇ ಎಂದು ಹೇಳಿದ್ದಕ್ಕೆ ಹೌದು, 1998-99ನೇ ಸಾಲಿನಲ್ಲಿ ನಿರ್ಧರಿಸಲಾಯಿತು ಎಂದು ಹೇಳಿದ್ದಾರೆ. ಡಿಸೆಂಬರ್ 9, 1997 ಕಾರಂತರು ನಿಧನರಾದ ದಿವಸ. ಅಂದಿನ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಕಾರಂತರ ಸಮಗ್ರ ಕೃತಿಗಳನ್ನು ಪ್ರಕಟಿಸಿದರು. ಇಂತಹ ಯೋಜನೆಯನ್ನು 1998-99ನೇ ಸಾಲಿನಲ್ಲಿ ನಿರ್ಧರಿಸಲಾಯಿತು ಎಂದು ತಾವು ಹೇಳಿದ್ದೀರಿ. ಇಷ್ಟು ದಿವಸದ ಒಳಗೆ ನಾವು ಸಮಗ್ರ ಕೃತಿಯನ್ನು ಪ್ರಕಟಿಸುತ್ತೇವೆಂದು ಒಂದು ಕಾಲ ಮಿತಿ ಎಂದು ಏನಾದರೂ ಸರ್ಕಾರ ಹಾಕಿಕೊಳ್ಳುತ್ತದೆಯೆ? ಇದು ಮೊದಲನೆಯದು, ಎರಡನೆಯದು, ಕನ್ನಡ ಸಂಸ್ಕೃತಿ ನಿರ್ದೇಶನಾಲಯಕ್ಕೆ ಪ್ರಕಟಣೆ ಹೊಣೆಯನ್ನು ಹೊರಿಸಿದೆ. ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಕೆಲಸವೇನು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕೆಲಸವೇನು? ಈ ಎರಡು ಪ್ರಶ್ನೆಗಳಿಗೆ ಮೊದಲು ಉತ್ತರ ಕೊಡಿ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, ಶಿವರಾಮ ಕಾರಂತರ ಸಮಗ್ರ 35 ಸಂಪುಟಗಳನ್ನು ಹೊರ ತರತಕ್ಕಂತಹ ನಿರ್ಧಾರವನ್ನು 1998-99ರ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ನೀವು ಹೇಳಿರುವುದು ಕಾಲಮಿತಿ, ಕೆಲವು ತಿಂಗಳು ಎಂದು ನಾವು ಕಾಲ

ಮಿತಿಯನ್ನು ಹಾಕಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ, ಪುಸ್ತಕ ಪ್ರಕಟಣೆಯಲ್ಲಿ ಸಂಪೂರ್ಣವಾದ ಗ್ರಂಥಗಳ ಹಕ್ಕುದಾರರಾದ ಶ್ರೀಮತಿ ಮಾಲಿನಿ ಮಲ್ಯರವರು ಹಾಗೂ ಎಸ್‌ಬಿಎಸ್. ಪಬ್ಲಿಕೇಷನ್ಸ್ ಅವರ 18 ಪುಸ್ತಕಗಳ ಮುದ್ರಣದ ಹಕ್ಕು ಇರುವುದರಿಂದ ಇವರನ್ನು ಸಂಪರ್ಕ ಮಾಡಿ ಇವರ ಸಹಕಾರ ಹಾಗೂ, ಸಮನ್ವಯದಿಂದ ಈ ಪ್ರಕಟಣೆಯನ್ನು ಹೊರತರಬೇಕಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡು ಇವರಿಗೆ ಸಂಪರ್ಕ ಮಾಡತಕ್ಕಂತಹ ಹಿನ್ನೆಲೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಕಾಲ ಮಿತಿ ಬಗ್ಗೆ ನಾವು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಮತ್ತೊಂದು ಪ್ರಕಟಣೆಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ತೆಗೆದುಕೊಂಡಿದೆ ಎನ್ನುವ ಹಿನ್ನೆಲೆಯಲ್ಲಿ ಪ್ರಕಟಣೆಗೆ ತಾವು ಪ್ರಾಧಿಕಾರದ ಒಂದು ಜವಾಬ್ದಾರಿ ಬಗ್ಗೆ ಕೇಳಿದ್ದೀರಿ,ಈ ಪ್ರಕಟಣೆಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ವಹಿಸಿಕೊಂಡಿರುವುದನ್ನು ನಾನು ತಮ್ಮ ಗಮನಕ್ಕೆ ತಂದು, ಕನ್ನಡ ಪ್ರಾಧಿಕಾರ ಕನ್ನಡ ಭಾಷೆಯನ್ನು ಅನುಷ್ಠಾನಕ್ಕೆ ತರಲಿಕ್ಕೆ, ಕನ್ನಡ ಭಾಷೆ ಬೆಳವಣಿಗೆ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಜವಾಬ್ದಾರಿ ಹಿನ್ನೆಲೆಯಲ್ಲಿ ಇದರ ಪ್ರಕಟಣೆಯನ್ನು ಕನ್ನಡ ಸಂಸ್ಕೃತಿ ನಿರ್ದೇಶನಾಲಯ ತೆಗೆದುಕೊಂಡಿರುವುದಾಗಿ ನಾನು ಹೇಳಿದ್ದುದು.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನನಗೆ ತಿಳಿದಿರುವ ಹಾಗೆ ಸುಮಾರು 40 ಕೃತಿಗಳು ಎಸ್.ಬಿ.ಎಸ್.ಪಬ್ಲಿಕೇಶನ್ ಅಂಡ್ ಡಿಸ್ಟ್ರಿಬ್ಯೂಶನ್ ಸಂಸ್ಥೆಯ ಹಕ್ಕಿನಲ್ಲಿದೆ. ಇದುವರೆಗೂ ಕೂಡ ಇವರಿಗೂ ಮತ್ತು ಸರ್ಕಾರಕ್ಕೂ ನಡುವೆ ಸರಿಯಾದ ಹೊಂದಾಣಿಕೆಯೇ ಆಗುತ್ತಿಲ್ಲ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ನಡೆಸಿದ ಮೂರು ಸಭೆಗಳಿಗೂ ಹಾಜರಾದಾಗ ಮೂರು ರೀತಿಯ ಭರವಸೆಗಳನ್ನು ನೀಡಿದೆಯೆಂದು ಸಂಸ್ಥೆಯವರು ಹೇಳಿದ್ದಾರೆ. ನಾನು ಕೇಳುವುದೇನೆಂದರೆ ಈ ಪುಸ್ತಕವನ್ನು ಪ್ರಕಟಿಸುವಲ್ಲಿ ನಿಜವಾಗಿಯೂ ಸರ್ಕಾರಕ್ಕೆ ಪ್ರಾಮಾಣಿಕತೆ ಇದೆಯೇ? ಒಂದೊಂದು ಬಾರಿಯೂ ಒಂದೊಂದು ರೀತಿಯ ಭರವಸೆಗಳನ್ನು ಕೊಟ್ಟರೆ ಹಿರಿಯ ಚೇತನವಾದ ಶಿವರಾಮ ಕಾರಂತರಿಗೆ ಅವಮಾನವಾಗುವುದಿಲ್ಲವೆ? ಸಂಸ್ಥೆಯವರು ಮುಂದೆ ಏನು ಹೇಳಿದ್ದಾರೆಂದರೆ ಕಾರಂತರ ಪುಸ್ತಕದ ಹಕ್ಕಿನ ವಿಷಯದಲ್ಲಿ ಸರ್ಕಾರವನ್ನು ನಂಬದ ಮಟ್ಟವನ್ನು ನಾವು ತಲುಪಿದ್ದೇವೆಂದಿದ್ದಾರೆ. ಆ ಕಾರಣದಿಂದ ನಾವು ನಮ್ಮಲ್ಲಿರುವ ಪುಸ್ತಕಗಳ ಹಕ್ಕುಗಳನ್ನು ಸರ್ಕಾರಕ್ಕೆ ನೀಡುವುದು ಕಷ್ಟ. ಸರ್ಕಾರ ಬೇಕಿದ್ದರೆ ನಮ್ಮಲ್ಲಿರುವ ಕೃತಿಗಳನ್ನು ಬಿಟ್ಟು ಉಳಿದವುಗಳನ್ನು ಪ್ರಕಟಿಸಲಿ ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ. ಇನ್ನು ಕನ್ನಡ ಪುಸ್ತಕಗಳ ಪ್ರಕಟಣೆ ಹಾಗೂ ಅವುಗಳ ಅಭಿವೃದ್ಧಿಗೋಸ್ಕರವೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವಿರುವಾಗ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಪುಸ್ತಕ ಪ್ರಕಟಿಸಲು ವಹಿಸಿರುವ ಸರ್ಕಾರದ ಕ್ರಮ ತಪ್ಪು ನಿರ್ಧಾರವೆಂದು ಹಿರಿಯ ಸಾಹಿತಿಗಳನೇಕರು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಏನು ಉತ್ತರಿಸುತ್ತದೆ ಎಂಬುದನ್ನು ಹೇಳಬೇಕು.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವರಾಮಕಾರಂತರ ಬಗ್ಗೆ ಸರ್ಕಾರಕ್ಕೆ ಹಾಗೂ ನಮಗೆ ಬಹಳಷ್ಟು ಗೌರವವಿದೆ. ಇವರ ಪುಸ್ತಕದ ಪ್ರಕಟಣೆಗೆ ಸಂಬಂಧಪಟ್ಟಂತೆ ಸರ್ಕಾರದ ಪ್ರಾಮಾಣಿಕತೆಯೂ ಇದೆ ಹಾಗೂ ಬದ್ಧತೆಯೂ ಕೂಡ ಇದೆ. ಎಸ್.ಬಿ.ಎಸ್. ಪಬ್ಲಿಕೇಶನ್‌ರವರು ಮತ್ತು ಮಾಲಿನಿ ಮಲ್ಯರವರ ನಿರ್ದಿಷ್ಟ ನಿಲುವು ಏನು ಎಂಬುದರ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರೋ ಅದು ತಪ್ಪು ಮಾಹಿತಿಯದ್ದಾಗಿದೆ. ಏಕೆಂದರೆ ಇತ್ತೀಚೆಗೆ

ನಾವು ಎಸ್.ಬಿ.ಎಸ್.ಪಬ್ಲಿಕೇಶನ್‌ನವರಿಗೆ ಪತ್ರ ಮುಖೇನ ಸಂಪರ್ಕ ಮಾಡಿರತಕ್ಕಂಥ ಹಿನ್ನೆಲೆಯೊಳಗೆ ಕೆಲವು ತಾಂತ್ರಿಕ ನಿರ್ಧಾರಗಳಿಗೆ ಹೊರಪಟ್ಟು ಈ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಾಗಿಲ್ಲ. ಇದರ ಬಗ್ಗೆ ನಾನೇ ಶ್ರೀಮತಿ ಮಾಲಿನಿ ಮಲ್ಯರವರನ್ನು ಭೇಟಿಯಾಗಿದ್ದೇನೆ. ಇಷ್ಟರಲ್ಲಿಯೇ ಅವರನ್ನು ಕರೆಯಿಸಿ ಒಂದು ಸಭೆಯನ್ನು ನಡೆಸುತ್ತೇನೆಂದು ಹೇಳಬಯಸುತ್ತೇನೆ. ಇನ್ನು ಇವರನ್ನು ಬಿಟ್ಟು ಸರ್ಕಾರ ಪ್ರಕಟಣೆ ಮಾಡತಕ್ಕಂಥ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇವರನ್ನು ಬಿಟ್ಟು ಮಾಡತಕ್ಕಂಥ ವಿಚಾರದಲ್ಲಿ ಬಹಳ ಮಹತ್ತರವಾದ ಪ್ರಕಟಣೆಗಳು ಶ್ರೀಮತಿ ಮಾಲಿನಿ ಮಲ್ಯರವರ ಹತ್ತಿರ ಹಾಗೂ ಎಸ್.ಬಿ.ಎಸ್.ಪಬ್ಲಿಕೇಶನ್‌ರವರ ಹತ್ತಿರ ಸುಮಾರು 18 ಪುಸ್ತಕಗಳು ಇವೆ. ಆದರೆ ಇವರನ್ನು ಬಿಟ್ಟು ಪ್ರಕಟಣೆ ಮಾಡತಕ್ಕಂಥ ಯೋಚನೆ ಸರ್ಕಾರಕ್ಕಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಅವರನ್ನು ಬಿಟ್ಟು ಪ್ರಕಟಣೆ ಮಾಡಿ ಎಂದು ನಾನು ಹೇಳಲೇ ಇಲ್ಲ. ಪಬ್ಲಿಶರ್ಸ್‌ರವರೇ ಇನ್ನು ನಾವು ಯಾವುದೇ ರೀತಿಯಿಂದ ಪುಸ್ತಕ ಪ್ರಕಟಣೆಗೆ ಸರ್ಕಾರಕ್ಕೆ ಕೊಡುವುದಿಲ್ಲ. ಸರ್ಕಾರ ನಮ್ಮ ಜೊತೆ ನಡೆದುಕೊಂಡಿರುವ ಧೋರಣೆಯಿಂದ ಇಂದು ನಾವು ಸರ್ಕಾರವನ್ನು ಯಾವುದೇ ರೀತಿಯಿಂದ ನಂಬದೇ ಇರುವ ಸ್ಥಿತಿಗೆ ಬಂದಿದ್ದೇವೆ ಎಂದಿದ್ದಾರೆ. ಸರ್ಕಾರ ಪ್ರಕಟಣೆ ಮಾಡುವುದೇ ಆದರೆ ನಮ್ಮಲ್ಲಿರುವ ಕೃತಿಗಳನ್ನು ಬಿಟ್ಟು ಬೇರೆಯವುಗಳನ್ನು ಮಾಡಲಿ ಎಂದು ಪಬ್ಲಿಶರ್ಸ್ ಹೇಳಿದ್ದಾರೆ. ಬೇಕಾದರೆ ಶ್ರೀಮತಿ ಮಾಲಿನಿ ಮಲ್ಯರವರು ಕೊಡಬಹುದು. ಶ್ರೀ ಶಿವರಾಮ ಕಾರಂತರ ಜನ್ಮಶತಾಬ್ದಿ 2002 ನೇ ಇಸವಿಗೆ ಇದೆ. ಆ ವರ್ಷದೊಳಗೆ ಆದರೂ ಇವರ ಸಮಗ್ರ ಕೃತಿಯನ್ನು ಪ್ರಕಟಿಸಿ ಪೂರೈಸುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಹೇಳಬೇಕು.

ಶ್ರೀಮತಿ ರಾಣಿ ಸತೀಶ್: ಖಂಡಿತಾ ಇದೆ. ಈ ನಿಟ್ಟಿನಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ. ಇನ್ನು ಪಬ್ಲಿಶರ್ಸ್‌ರವರ ಕಡೆಯಿಂದ ನಾವು ಉತ್ತರವನ್ನು ನಿರೀಕ್ಷಿಸುತ್ತಿರುವ ಹಿನ್ನೆಲೆಯಲ್ಲಿಯೇ ಒಂದು ಸಭೆಯನ್ನು ಕೂಡ ಸದ್ಯದಲ್ಲಿಯೇ ಕರೆದು ಆ ಸಭೆಗೆ ಅವರನ್ನೂ ಕರೆಸಿ ಇದರ ಬಗ್ಗೆ ಇತ್ಯರ್ಥಪಡಿಸುತ್ತೇನೆ. ಶಿವರಾಮ ಕಾರಂತರ ಜನ್ಮಶತಾಬ್ದಿ ವರ್ಷದೊಳಗೆ ಪುಸ್ತಕ ಪ್ರಕಟಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು.

ಶ್ರೀ ಎಸ್.ಸುರೇಶ್‌ಕುಮಾರ್: ಕಾರಂತರು ಇದ್ದಿದ್ದರೆ ಇದರ ಬಗ್ಗೆಯೇ ಒಂದು ಪುಸ್ತಕವನ್ನು ಬರೆದುಬಿಡುತ್ತಿದ್ದರು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು): ಹಿಂದಿನ ಸರ್ಕಾರವನ್ನು ನೀವು ನಂಬಿಲ್ಲ. ಈಗ ನಂಬಬಹುದಾದ ಸರ್ಕಾರ ಬಂದಿದೆ. ಆ ರೀತಿ ಕೆಲಸ ಮಾಡುತ್ತೇವೆ.

ಕುಣಿಗಲ್‌ನಲ್ಲಿ ಕ್ರೀಡಾಂಗಣ

220 (2250) ಶ್ರೀ ಮುದ್ದಹನುಮೇಗೌಡ ಎಸ್.ಪಿ.(ಕುಣಿಗಲ್):- ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ;